# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 744/2023

**ಸಾಕ್ಷಿಯನ್ನು ದಿಃ 05.08.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ.T.M ವಕೀಲರಿಂದಃ**

ಆರೋಪಿ ಬಟ್ಟೆ ವ್ಯಾಪಾರ ಮಾಡುತ್ತಾರೆ. ಆರೋಪಿ ನನ್ನಿಂದ ಟಿಂಬರ್ ವ್ಯವಹಾರದ ಅಭಿವೃದ್ದಿಗಾಗಿ ರೂ. 10 ಲಕ್ಷ ಸಾಲ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನನಗೆ ಹುಣಸೂರಿನ ರವಿ ಎಂಬುವವರು ಗೊತ್ತು. ಆರೋಪಿ ಸದರಿ ರವಿರವರ ಬಳಿ ವ್ಯವಹಾರ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ. ಆರೋಪಿ ನನ್ನ ಜೊತೆ ಯಾವುದೇ ಹಣಕಾಸಿನ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ರು॥ 20 ಸಾವಿರಕ್ಕೂ ಹೆಚ್ಚಿನ ಹಣದ ವ್ಯವಹಾರವನ್ನು ಚೆಕ್ ಮೂಲಕ ಮಾಡಬೇಕು ಎಂದರೆ ಆರೋಪಿ ಮೊದಲು ಕೂಡ ನನ್ನ ಜೊತೆ ವ್ಯವಹಾರ ಮಾಡುತ್ತಿದ್ದರು. ಆರೋಪಿ ಡಿಸೆಂಬರ್ 2023ರಲ್ಲಿ ಚೆಕ್ ಕೊಟ್ಟಿದ್ದಾರೆ. ಕೆನರಾ ಬ್ಯಾಂಕ್ ನ ಚೆಕ್ ಕೊಟ್ಟಿದ್ದಾರೆ, ಚೆಕ್ ಸಂಖ್ಯೆ ನೆನಪಿಲ್ಲ. ಆರೋಪಿ ನನ್ನಿಂದ ಹಣ ತೆಗೆದುಕೊಂಡು ಚೆಕ್ ಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆದಾಯ ತೆರಿಗೆ ಪಾವತಿದಾರನಲ್ಲ. ವಾರ್ಷಿಕ ರೂ. 10 ಆದಾಯ ಇದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಪಹಣಿ ಕೊಟ್ಟಿದ್ದೇನೆ. ಆರೋಪಿಗೆ ನೋಟೀಸ್ ಕೊಟ್ಟ ತಾರೀಖು ಮರೆತಿದ್ದೇನೆ. ಜಮೀನಿನಲ್ಲಿ ಖರ್ಚು ಜಾಸ್ತಿ ಆದಾಯ ಕಡಿಮೆ ಎಂದರೆ ಆ ವರ್ಷ ಶುಂಠಿ ಹಾಕಿದ್ದು ಹೆಚ್ಚು ಆದಾಯ ಬಂದಿತ್ತು. ನನಗೆ ಜಮೀನಿನಿಂದ ರೂ. 10 ಲಕ್ಷ ಆದಾಯ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ಬೇರೆ ಜಮೀನನ್ನು ಮಾಡುತ್ತಿದ್ದೆ. ನಾನು ಅನ್ಯತಾ ಫಾಯಿದೆ ಪಡೆಯಲು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವ್ಯವಸಾಯದ ಖರ್ಚು ಜಾಸ್ತಿಯಾಗಿದ್ದು ಆದಾಯ ಕಡಿಮೆ ಇರುವ ಕಾರಣ ರೂ. 10 ಲಕ್ಷ ಸಾಲ ಕೊಡಲು ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ.

ಯಾವ ತಾರೀಖು, ತಿಂಗಳಲ್ಲಿ ಸಾಲ ಕೇಳಲು ಬಂದರು ಎಂದು ನೆನಪಿಲ್ಲ. ಆರೋಪಿಗೆ ನೋಟೀಸ್ ಕಳುಹಿಸಿಲ್ಲ ಎಂದರೆ ಕಳುಹಿಸಿದ್ದೇನೆ. ನನ್ನ ಮತ್ತು ಆರೋಪಿಯ ಮಧ್ಯೆ ವ್ಯವಹಾರ ನಡೆದಿದೆ ಎಂಬುದನ್ನು ನೋಡಿದವರು ಯಾರು ಇಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.